**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 2222/2022**

ದಿನಾಂಕಃ **25.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ರಾಜಪ್ಪ | ಪ್ರಾಸ.-2 |
| ತಂದೆಯ ಹೆಸರುಃ | ಲಕ್ಷ್ಮಯ್ಯ | |
| ವಯಸ್ಸು ಃ | 55 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಜಿಗಣೆಹಳ್ಳಿ | |

ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಾದ ಶ್ರೀಮತಿ ಬಿ ಆರ್ ಆರ್ ವಕೀಲರಿಂದ ಃ

ಜಿಗಣೆಹಳ್ಳಿಯಲ್ಲಿ ನಾನು ಹುಟ್ಟಿದಾಗಿನಿಂದ ವಾಸವಾಗಿರುತ್ತೇನೆ. ಈ ಪ್ರಕರಣವನ್ನು ಯತೀಶ್ ರವರು ಮಂಜಪ್ಪ ಮತ್ತು ಇತರೇ ಆರೋಪಿಗಳ ವಿರುದ್ಧ ಹೂಡಿರುತ್ತಾರೆ. ಸುಮಾರು 10 ವರ್ಷಗಳ ಹಿಂದೆ ಯತೀಶ್ ರವರು ಅವರ ಮನೆಗೆ ಹೋಗಲು ದಾರಿ ಬಿಟ್ಟು ಕೊಡುವಂತೆ ಗ್ರಾಮಸ್ಥರಲ್ಲಿ ಕೇಳಿರುತ್ತಾರೆ. ಗ್ರಾಮಸ್ಥರು ದಾರಿ ಬಿಟ್ಟು ಕೊಡುವುದಿಲ್ಲ ಎಂದು ಗ್ರಾಮಸ್ಥರಾದ ಮಂಜಪ್ಪ, ರಾಜಪ್ಪ, ಕುಮಾರಪ್ಪ ಮತ್ತು ಇತರೇಯವರು ಊರಿನ ಗೌಡರು ಆಗಿದ್ದು ಗಲಾಟೆ ಮಾಡಿರುತ್ತಾರೆ. ನಂತರ ಜಗಳವಾಗಿ ಪೋಲಿಸ್ ಠಾಣೆಗೆ ಹೋಗಿರುತ್ತಾರೆ. ನಂತರ ಆರೋಪಿಗಳು ಬಂದು ಗ್ರಾಮಸ್ಥರನ್ನು ಸೇರಿಸಿ ಪಿರ್ಯಾದಿಗೆ ಯಾರೂ ಮಾತನಾಡಿಸಬಾರದು, ಆತನೊಂದಿಗೆ ಯಾರುಾ ವ್ಯವಹಾರ ಮಾಡಬಾರದು ಎಂದು ತಮಟೆ ಬಾರಿಸಿ ಬಹಿಷ್ಕಾರ ಹಾಕಿರುತ್ತಾರೆ. ತಮಟೆಯನ್ನು ಬಸಪ್ಪ ರವರು ಹೊಡೆದಿರುತ್ತಾರೆ. ಈಗಲೂ ಸಹ ಪ್ರತಿವಾದಿಗೆ ಬಹಿಷ್ಕಾರ ಹಾಕಿದ್ದು ಅವರು ದೇವಸ್ಥಾನಕ್ಕೆ ಹೋದರೆ ಪೂಜೆ ಮಾಡಿಕೊಡುವುದಿಲ್ಲ.

ಪಾಟೀಸವಾಲುಃ ಆರೋಪಿ ಪರ ವಕೀಲರು ಸಮಯಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.